‘ಪ್ರಯತ್ನಿಸಿ ನೋಡಿ, ಒಂದೆರಡು ದಿನದಲ್ಲೇ ಬರಬೇಕೆಂದೇನಿಲ್ಲ. ಒಂದು ವಾರವಾದರೂ ಚಿಂತೆಯಿಲ್ಲ.’

‘ಸರಿ ಹಾಗಾದರೆ, ನೀವಿಷ್ಟು ಒತ್ತಾಯ ಮಾಡುತ್ತಿರುವಿರಾದರೆ...’

ಒಂದು ವಾರದ ನಂತರ ಶುಭಂಕರ್ ಮಗಳೊಂದಿಗೆ ಸಾತ್ವಿಕನನ್ನು ಕರೆದುಕೊಂಡು ಮಿತಾಲಿಯ ಹಾಡಿನ ಕ್ಲಾಸಿಗೆ ಹೋದ. ಅವರನ್ನು ನೋಡುತ್ತಲೆ ಮಿತಾಲಿಯ ಗುರುಗಳು ನಗುತ್ತ,

‘ಈ ರಜೆಯಲ್ಲಿ ನಿಮ್ಮ ಮಗಳ ಧ್ವನಿಯ ಮಟ್ಟ ಮೀತಾ ಲೋಲಗೆಕರನಂತಾಗಿದೆ. ಔಷಧಿಯಿಂದಾಗಿ ಸ್ವರ ಹಾಳಾಗಿರುವುದನ್ನು ಆಗೊಮ್ಮೆ ಈಗೊಮ್ಮೆ ನಾನು ಕೇಳಿದ್ದೇನೆ. ಆದರೆ, ಅನಾರೋಗ್ಯದಲ್ಲಿ ಧ್ವನಿ ಇಷ್ಟರ ಮಟ್ಟಿಗೆ ಸುಧಾರಿಸಿರುವುದಕ್ಕೆ ಮಿತಾಲಿಯೊಬ್ಬಳೇ ಉದಾಹರಣೆ’ ಎಂದರು.

ಶುಭಂಕರ್ ಹಾಗೂ ಸಾತ್ವಿಕ ಒಬ್ಬರನ್ನೊಬ್ಬರು ನೋಡಿ ನಕ್ಕರು. ಸ್ವತಃ ಗುರುಗಳು ಹಾರ್ಮೋನಿಯಮ್ ನುಡಿಸಲು ಕುಳಿತರು. ಮತ್ತೊಬ್ಬ ಹುಡುಗ ತಬಲ ಬಾರಿಸಲು ಕುಳಿತ.

ಮಿತಾಲಿ ಹಾರ್ಮೋನಿಯಮ್ ಸ್ವರಗಳೊಂದಿಗೆ ತನ್ನ ಹಾಡನ್ನಾರಂಭಿಸಿದಳು.

‘ಪ್ರಿಯತಮಾ... ನೀನಿಲ್ಲದೆ ಬದುಕಲ್ಹೇಗೆ...’

ಮಿತಾಲಿ ಸರಿಯಾಗಿಯೇ ಹಾಡಿನ ಸ್ವರಗಳನ್ನು ಎತ್ತಿ ಹಿಡಿದಿದ್ದಳು. ಅದೇ ಶಬ್ದ ಅದೇ ಸ್ವರಗಳು, ಆಕೆಯ ಗುರುಗಳು ಆಕೆಯಿಂದ ಸಾಕಷ್ಟು ಅಭ್ಯಾಸ ಮಾಡಿಸಿದ್ದರಿಂದ ಮಿತಾಲಿ ಎಲ್ಲಿಯೂ ತಪ್ಪುತ್ತಿರಲಿಲ್ಲ. ಆದರೆ, ಎದುರು ಕುಳಿತಿರುವ ಶುಭಂಕರ್ ಹಾಗೂ ಸಾತ್ವಿಕ್‌ಗೆ ಈ ಹಾಡು ಆ ಹಾಡಿನಂತಿಲ್ಲ ಅನ್ನುವುದು ಗೊತ್ತಾಗುತ್ತಿತ್ತು. ತಪ್ಪೆಲ್ಲಿದೆ ಅನ್ನುವುದನ್ನು ಬೆರಳು ಮಾಡಿ ತೋರಿಸಲು ಆಗುತ್ತಿರಲಿಲ್ಲ, ಆದರೆ, ಅದು ಭಾವನೆಗಳೇ ಇಲ್ಲದ ಹಾಡು ಅನಿಸುತ್ತಿತ್ತು. ಮೀತಾ ಲೋಲಗೆಕರ್ ‘ಪ್ರಿಯತಮಾ’ ಎಂದು ಹಾಡುವಾಗಿನ ಆರ್ತ ಭಾವನೆ ಕೇಳುಗರ ಮನಸ್ಸು ಕಲಕುತ್ತಿತ್ತು. ಕೇಳುವವನು ನಿಜವಾದ ರಸಿಕನಾಗಿರುತ್ತಿದ್ದರೆ ಅವನ ಕಣ್ಣಾಲಿಗಳು ಒದ್ದೆಯಾಗಿರುತ್ತಿದ್ದವು. ಮೀತಾಳ ಹೃದಯದ ವೇದನೆ, ಆ ದುಃಖ ಆ ನಾಲ್ಕು ಶಬ್ದಗಳಿಂದ

